# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿನ (ಶಾಸಕರ ಭವನವೂ ಸೇರಿದಂತೆ) ಗಣಕ ಯಂತ್ರಗಳ ಮತ್ತು ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಸಂಬಂಧ ಹಣ ಪಾವತಿಸುವ ಬಗ್ಗೆ.

*****

**ಓದಲಾಗಿದೆ:** 1.ಕರಾರು ಒಪ್ಪಂದ ಪತ್ರ ದಿನಾಂಕ:03.03.2022

2.ಮೆ:ಕಿಯೋನಿಕ್ ಸಂಸ್ಥೆ, ಬೆಂಗಳೂರು, ಇವರ Invoice Serial No.KSEDC/ITS/KSS/44/2022-23 ದಿನಾಂಕ:23.06.2022.

3.ಕಡತ ಸಂಖ್ಯೆ:ಕವಿಪ/ಕಾಕಾ/56/ಗಪ್ರಎಎಂಸಿ/2021(ಭಾಗ-2) ಕಂಡಿಕೆ ಸಂಖ್ಯೆ:39 ರಿಂದ 60 ರವರೆಗೆ.

4/8/22

ಪ್ರಸ್ತಾವನೆ:

ಓದಲಾಗಿರುವ ಕ್ರಮ ಸಂಖ್ಯೆ: (1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ (ಶಾಸಕರ ಭವನವೂ ಸೇರಿದಂತೆ) ಅಳವಡಿಸಲಾಗಿರುವ 143 ಗಣಕ ಯಂತ್ರಗಳ ಹಾಗೂ 91 ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಗೆ ಸಂಬಂಧಿಸಿದಂತೆ **ಮೆ:ಕಿಯೋನಿಕ್ಸ್, ಎರಡನೇ ಮಹಡಿ ಟಿ.ಟಿ.ಎಂ.ಸಿ "ಎ"ಬ್ಲಾಕ್, ಶಾಂತಿನಗರ ಬೆಂಗಳೂರು-560027**ಇವರೊಂದಿಗೆ **ದಿನಾಂಕ:03.03.2022 ರಿಂದ 02.03.2024** ರವರೆಗೆ ಎರಡು ವರ್ಷಗಳ ಅವಧಿಗೆ ನಿರ್ವಹಣಾ ಗುತ್ತಿಗೆಯ ಒಟ್ಟು ಮೊತ್ತ ರೂ.9,83,058/-ಗಳನ್ನು 03 ತಿಂಗಳಗೊಮ್ಮೆ 8 ಸಮಾನ ಕಂತುಗಳಲ್ಲಿ ಪಾವತಿಸಲು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ **ದಿನಾಂಕ:03/03/2022 ರಿಂದ 02/06/2022ರ** ಅವಧಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಶಾಸಕರ ಭವನವೂ ಸೇರಿದಂತೆ) 143 ಗಣಕ ಯಂತ್ರಗಳ ಹಾಗೂ 91 ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆ ಕೈಗೊಂಡಿರುವ ಸಂಬಂಧ **ಮೆ:ಕಿಯೋನಿಕ್ಸ್ ಸಂಸ್ಥೆಯವರು** ಜಿ.ಎಸ್.ಟಿ ತೆರಿಗೆ ಒಳಗೊಂಡಂತೆ ಒಟ್ಟು ಬಿಲ್ಲಿನ ಮೊತ್ತ ರೂ.1,22,832/-ಗಳನ್ನು ಪಾವತಿಸುವಂತೆ ಕೋರಿ ಬಿಲ್ಲನ್ನು ಸಲ್ಲಿಸಿರುತ್ತಾರೆ. ಓದಲಾಗಿರುವ ಕ್ರಮ ಸಂಖ್ಯೆ: 3 ರಲ್ಲಿ **ಮೆ:ಕಿಯೋನಿಕ್ಸ್ ಸಂಸ್ಥೆಯವರು** ಸಲ್ಲಿಸಿರುವ ಜಿ.ಎಸ್.ಟಿ ತೆರಿಗೆ ಒಳಗೊಂಡಂತೆ ರೂ.1,22,832/-ಗಳಲ್ಲಿ (ಒಂದು ಲಕ್ಷದ ಇಪ್ಪತ್ತೆರಡು ಸಾವಿರದ ಎಂಟುನೂರ ಮೂವತ್ತೆರಡು ರೂಪಾಯಿಗಳು ಮಾತ್ರ) ಶೇ.2 ರಷ್ಟು ಜಿ.ಎಸ್.ಟಿ. ಹಾಗೂ ಶೇ.2 ರಷ್ಟು ಆದಾಯ ತೆರಿಗೆಯನ್ನು ಕಟಾಯಿಸಿ ಸದರಿಯವರಿಗೆ ಪಾವತಿಸುವ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದನೆಯನ್ನು ನೀಡಿರುತ್ತಾರೆ.

**ಆದೇಶ ಸಂಖ್ಯೆ:ಕವಿಪ:ಆ-1:24:ಗಪ್ರಿಂ:ವಾನಿ:2022**

**ಬೆಂಗಳೂರು, ದಿನಾಂಕ:03.08.2022.**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ:03/03/2022 ರಿಂದ 02/06/2022ರ ಅವಧಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಶಾಸಕರ ಭವನವೂ ಸೇರಿದಂತೆ) 143 ಗಣಕ ಯಂತ್ರಗಳ ಹಾಗೂ 91 ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆ ಕೈಗೊಂಡಿರುವ ಸಂಬಂಧ **ಮೆ:ಕಿಯೋನಿಕ್ಸ್, ಎರಡನೇ ಮಹಡಿ ಟಿ.ಟಿ.ಎಂ.ಸಿ,"ಎ"ಬ್ಲಾಕ್, ಶಾಂತಿನಗರ, ಬೆಂಗಳೂರು-560027** ಇವರಿಗೆ ಬಿಲ್ಲಿನ ಮೊತ್ತ ರೂ.1,22,832/-ಗಳಲ್ಲಿ (ಒಂದು ಲಕ್ಷದ ಇಪ್ಪತ್ತೆರಡು ಸಾವಿರದ ಎಂಟುನೂರ ಮೂವತ್ತೆರಡು ರೂಪಾಯಿಗಳು ಮಾತ್ರ) ಶೇ.2 ರಷ್ಟು ಜಿ.ಎಸ್.ಟಿ. ಹಾಗೂ ಶೇ.2 ರಷ್ಟು ಆದಾಯ ತೆರಿಗೆಯನ್ನು ಕಟಾಯಿಸಿ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2011-02-103-2-01-(051) ಸಾಮಾನ್ಯ ವೆಚ್ಚಗಳು" ಅಡಿಯಲ್ಲಿ ಭರಿಸತಕ್ಕದ್ದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಎಸ್. ನಿರ್ಮಲ)
ಅಪರ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**ಪ್ರತಿಗಳು:-**

1.ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2.ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3.ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4.ಅಪರ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರುಗಳಿಗೆ, ಕವಿಪ.
5.ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರ ಶಾಖೆ-2/ಕವಿಪ.
6.ಅಧೀನ ಕಾರ್ಯದರ್ಶಿ, ಗಣಕ ಕೇಂದ್ರ, ಕವಿಪ.
7.ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8.ಮೆ:ಕಿಯೋನಿಕ್ಸ್, ಎರಡನೇ ಮಹಡಿ ಟಿ.ಟಿ.ಎಂ.ಸಿ."ಎ"ಬ್ಲಾಕ್, ಬಿ.ಎಂ.ಟಿ.ಸಿ.ಶಾಂತಿನಗರ, ಬೆಂಗಳೂರು-27.
9.ಆಂತರಿಕ ಆರ್ಥಿಕ ಸಲಹೆಗಾರು ಕ.ವಿ.ಮಂ.
10.ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.